ಹತ್ತಿ ಬೆಳೆಯಲ್ಲಿ ಎಲೆ ಕೆಂಪಾಗುವಿಕೆ ತಡೆಯಲು ಮುಂಜಾಗ್ರತೆ ಮುಖ್ಯ

ವೈ. ಆರ್. ಆಲದಕಟ್ಟಿ
ಪ್ರಕಟಣಾ ಕೇಂದ್ರ, ಕೃವಿವಿ, ಧಾರವಾಡ – 580 005
☎: 9448861040
ಮಿಂಚಂಚೆ: yraladakatti@rediffmail.com

ಹತ್ತಿ ಉತ್ತರ ಕರ್ನಾಟಕದ ಪ್ರಮುಖ ವಾಣಿಜ್ಯ ಬೆಳೆ. ಅದರಲ್ಲೂ ಬಿ.ಟಿ. ಹತ್ತಿ ಸಂಕರಣ ತಳಿಗಳು ಬಿಡುಗಡೆಯಾದ ನಂತರದಲ್ಲಿ ಹತ್ತಿ ಬೆಳೆ ಕ್ಷೇತ್ರ ಎಲ್ಲ ಭಾಗಗಳಲ್ಲಿ ಹೆಚ್ಚಾಗಿದೆ. ಈ ಮೊದಲು ಹತ್ತಿ ಬೆಳೆಯನ್ನೇ ಸಂಪೂರ್ಣ ಹಾಳು ಮಾಡಿದ ಕಾಯಿಕೊರಕಗಳ ಬಾಧೆಯನ್ನು ಯಶಸ್ವಿಯಾಗಿ ತಪ್ಪಿಸಿದ ಬಿ.ಟಿ. ಹತ್ತಿಯಿಂದಾಗಿ ಈ ಬೆಳೆ ಕ್ಷೇತ್ರ ಹೆಚ್ಚಾಗಲು ಕಾರಣವಾಗಿದೆನ್ನಬಹುದು. ಉತ್ತರ ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿ ಮಳೆಯಾಶ್ರಿತ ಹಾಗೂ ನೀರಾವರಿ ಬೆಳೆಯಾಗಿ ಹತ್ತಿ ಬೆಳೆಯಲಾಗುತ್ತಿದೆ. ಇತ್ತೀಚಿನ ಅಸಹಜ ಮಳೆಯಿಂದಾಗಿ, ಮುಂಗಾರು ಮಳೆ ತಡವಾಗಿ ಬಂದಲ್ಲಿ ಹಾಗೂ ಕಾಲುವೆ ನೀರಿನ ಆಶ್ರಯದಲ್ಲಿ ಹತ್ತಿಯನ್ನು ಆಗಸ್ಟ್ ತಿಂಗಳ ಮೊದಲ ಪಾಕ್ಷಿಕದವರೆಗೂ ಬಿತ್ತನೆ ಮಾಡುತ್ತಿರುವುದನ್ನು ಕಾಣಬಹುದಾಗಿದೆ. ತಡವಾದ ಬಿತ್ತನೆಯಿಂದ, ಬೆಳೆಗೆ ಅಸಮತೋಲನವಾಗಿ ಪೋಷಕಾಂಶಗಳ ಒದಗಿಸುವಿಕೆಯಿಂದ, ಹಾಗೂ ಅಸಮರ್ಪಕವಾಗಿ ನೀರು ಹಾಯಿಸುವುದರಿಂದ ಬೆಳೆಯಲ್ಲಿ ಹಲವಾರು ಸಸ್ಯ ಶರೀರ ನ್ಯೂನ್ಯತೆಗಳು ಸಾಮಾನ್ಯವಾಗಿ ಕಂಡುಬರುತ್ತಿವೆ. ಅವುಗಳಲ್ಲಿ **"ಹತ್ತಿ ಎಲೆ ಕೆಂಪಾಗುವುದು"** ಒಂದು ಪ್ರಮುಖ ಸಮಸ್ಯೆಯಾಗಿದೆ. ಸಾಮಾನ್ಯವಾಗಿ ರೈತರು ಇದನ್ನು **"ಕೆಂಪು ರೋಗ"** ಎಂದು ಕರೆಯುತ್ತಿದ್ದು, ವಾಸ್ತವಿಕವಾಗಿ ಇದು **'ರೋಗ'** ಆಗಿರುವುದಿಲ್ಲ. ಇದು ಹಲವಾರು ಕಾರಣಗಳಿಂದ ಹತ್ತಿ ಬೆಳೆಯ ಎಲೆಗಳಲ್ಲಿ ಕಂಡು ಬರುವ ಸಸ್ಯ ಶರೀರ ನ್ಯೂನ್ಯತೆ ಆಗಿದೆ. **ಬೆಳೆಯಲ್ಲಿ "ಎಲೆ ಕೆಂಪಾದ" ನಂತರ ಇದರ ಸುಧಾರಣೆ ಅಸಾಧ್ಯ ಆದ್ದರಿಂದ, ಎಲೆ ಕೆಂಪಾಗುವುದಕ್ಕಿಂತ ಮುಂಚೆ ಅಥವಾ ಈ ನ್ಯೂನ್ಯತೆ ಬೆಳೆಯಲ್ಲಿ ನಿಗದಿತ ಅವಧಿಯಲ್ಲಿ ಬಂದೇ ಬರುವುದೆಂದು ತಿಳಿದು ಮುಂಜಾಗ್ರತೆ ಕ್ರಮಗಳನ್ನು ಅನುಸರಿಸುವುದು ಮುಖ್ಯ.** ಇಲ್ಲವಾದಲ್ಲಿ ಅತಿಯಾದ ಭಾದೆಯಿಂದ ಶೇ. 40–50 ರಷ್ಟು ಹತ್ತಿ ಇಳುವರಿ ಕಡಿಮೆಯಾಗಬಹುದಾಗಿದೆ ಹಾಗೂ ಹತ್ತಿಯ ಗುಣಮಟ್ಟವೂ ಕೆಡುವ ಸಂಭವ ಹೆಚ್ಚು.

➢ ಎಲೆ ಕೆಂಪಾಗುವುದೇಕೆ ?

- ಇದು ಹಲವಾರು ಕಾರಣಗಳಿಂದ ಬರುವ ಒಂದು ಕ್ಲಿಷ್ಟಕರ ಸಮಸ್ಯೆ. ಬೆಳೆಯ ಶರೀರ ಕ್ರಿಯೆಗಳಲ್ಲಿನ ವ್ಯತ್ಯಾಸದಿಂದಾಗಿ ಹತ್ತಿಯ ಎಲೆಗಳು ಕೆಂಪಾಗುವವು. ಬೆಳವಣಿಗೆ ಹಂತದಲ್ಲಿ ಮಣ್ಣಿನಲ್ಲಿ ಅವಶ್ಯಕ ಪೋಷಕಾಂಶಗಳ ಕೊರತೆ ಉಂಟಾದಲ್ಲಿ ಅದರಲ್ಲೂ ಸಾರಜನಕದ ಕೊರತೆಯಾದಲ್ಲಿ ಎಲೆ ಕೆಂಪಾಗುವಿಕೆಯನ್ನು ಕಾಣಬಹುದು.
- ಶಿಫಾರಸ್ಸು ಪ್ರಮಾಣದಲ್ಲಿ ಸಾರಜನಕ, ರಂಜಕ, ಪೋಟ್ಯಾಶ್ ಪೋಷಕಾಂಶಗಳನ್ನು ಸಮತೋಲನ ರೀತಿಯಲ್ಲಿ ಬೆಳೆಗೆ ಒದಗಿಸದಿರುವುದು ಒಂದು ಕಾರಣವಾಗಿದೆ.
- ವಿಜಾತೀಯ ಸಂಕರಣ ಹತ್ತಿ ತಳಿಗಳಲ್ಲಿ ಸಜಾತೀಯ ಸಂಕರಣ ತಳಿಗಳಿಗಿಂತ ಎಲೆ ಕಂಪಾಗುವಿಕೆಯನ್ನು ಹೆಚ್ಚಾಗಿ ಕಾಣಬಹುದು. ದೇಶಿ ಹತ್ತಿ ತಳಿಗಳಲ್ಲಿ ಈ ಸಮಸ್ಯೆ ಕಂಡುಬರುವುದಿಲ್ಲ.
- ಮಣ್ಣಿನಲ್ಲಿನ ಸಾವಯವ ಅಂಶವು ಮುಖ್ಯವಾಗಿದ್ದು ಹೆಚ್ಚು ಪ್ರಮಾಣದಲ್ಲಿ ಸಾವಯವ ಗೊಬ್ಬರ ಬಳಸಿದ ಬೆಳೆಯಲ್ಲಿ ಈ ನ್ಯೂನ್ಯತೆ ಕಡಿಮೆ ಎನ್ನಬಹುದು.
- ಸಾಮಾನ್ಯವಾಗಿ ಅಕ್ಟೋಬರ್–ಡಿಸೆಂಬರ್ ತಿಂಗಳುಗಳಲ್ಲಿ ವಾತಾವರಣ ಉಷ್ಣಾಂಶ ಕಡಿಮೆಯಾದಾಗ, ತಂಪಾದ ವಾತಾವರಣವಿದ್ದಾಗ, ಬೆಳೆಯು ಮಣ್ಣಿನಲ್ಲಿನ ಪೋಷಕಾಂಶಗಳನ್ನು ಹೀರಿಕೊಳ್ಳುವ ಪ್ರಮಾಣ ಕಡಿಮೆಯಾಗುವುದು. ಇದರಿಂದಾಗಿ ಬೆಳವಣಿಗೆ ಹೊಂದುತ್ತಿರುವ ಎಲೆಗಳಿಗೆ ಪೋಷಕಾಂಶಗಳ ಪೂರೈಕೆ ಕಡಿಮೆಯಾಗಿ ಎಲೆ ಕೆಂಪಾಗುವುದು.
- ಬಿ.ಟಿ. ಹತ್ತಿ ಬೆಳೆಯಲ್ಲಿ ಒಂದೇ ಸಮಯದಲ್ಲಿ ಹೆಚ್ಚು ಪ್ರಮಾಣ ಹೂ–ಕಾಯಿ ಬೆಳವಣಿಗೆ ಹೊಂದುವುದರಿಂದ ಬೆಳೆಗೆ ಹೆಚ್ಚು ಪ್ರಮಾಣದ ಪೋಷಕಾಂಶ ಬೇಕಾಗುವುದು.
- ಅಕ್ಟೋಬರ್–ನವೆಂಬರ್ ತಂಪಾದ ತಿಂಗಳುಗಳಲ್ಲಿ ರಾತ್ರಿಯ ಉಷ್ಣಾಂಶ ಕಡಿಮೆಯಾಗುತ್ತ ಬಂದಂತೆ, ಸಸ್ಯ ಶರೀರ ಕ್ರಿಯೆಯಲ್ಲಿ ವ್ಯತ್ಯಾಸವಾಗುತ್ತದೆ. ಅದರೊಂದಿಗೆ ಮಣ್ಣಿನಲ್ಲಿರುವ ಲಘು ಪೋಷಕಾಂಶಗಳ ಲಭ್ಯತೆಯೂ ಕಡಿಮೆಯಾಗುವುದರಿಂದ ಬೆಳೆಯಲ್ಲಿ ಇವುಗಳ ಕೊರತೆ ಕಾಣಿಸಿಕೊಳ್ಳುತ್ತದೆ. ಅದರಲ್ಲೂ ಮೆಗ್ನೀಶಿಯಂ ಕೊರತೆ ಹೆಚ್ಚಾಗುವುದು.
- ಚಳಿಗಾಲದಲ್ಲಿ ರಾತ್ರಿ ಉಷ್ಣಾಂಶ 15^0 ಸೆಂ. ಕ್ಕಿಂತಲೂ ಕಡಿಮೆ ಹಾಗೂ ದಿನದ ಉಷ್ಣಾಂಶ 36^0 ಸೆಂ. ಕ್ಕಿಂತಲೂ ಹೆಚ್ಚಾದಾಗ ಮತ್ತು ಈ ಸ್ಥಿತಿ 10–12 ದಿನಗಳ ವರೆಗೆ ಮುಂದುವರೆದಾಗ ಹಾಗೂ ಇದರೊಂದಿಗೆ ಮಣ್ಣಿನಲ್ಲಿ ತೇವಾಂಶದ ಕೊರತೆಯಾದಾಗ ಎಲೆ ಕೆಂಪಾಗುವಿಕೆ ಪ್ರಾರಂಭವಾಗುವುದು. ಈ ಪರಿಸ್ಥಿತಿಯಲ್ಲಿ ಸಸಿಗಳಿಗೆ ಆಹಾರಾಂಶ ಒದಗಿಸುವ ಬೇರುಗಳ ಕ್ರಿಯೆ ದಿಡೀರನೆ ಕಡಿಮೆಯಾಗಿ, ಮಣ್ಣಿನಿಂದ ಪೋಷಕಾಂಶಗಳನ್ನು ಹೀರಿಕೊಳ್ಳುವ ಶಕ್ತಿ ಕಡಿಮೆಯಾಗುವುದು. ಇದರಿಂದಾಗಿ ಎಲೆಗಳಲ್ಲಿ ಪತ್ರ ಹರಿತ್ತು ಉತ್ಪಾದನೆ ಪ್ರಮಾಣ ಕಡಿಮೆಯಾಗಿ "ಅಂಥೋಸೈನಿನ್" ಎಂಬ 'ಕೆಂಪು' ಬಣ್ಣದ ಕಣಗಳ ಉತ್ಪಾದನೆಯಾಗಿ ಎಲೆಗಳು ಕೆಂಪಾಗುವವು.

- ಹೆಚ್ಚು ನೀರು ನಿಲ್ಲುವ, ತಂಪಾದ ಅಥವಾ ತೇವಾಂಶದ ಅತಿ ಕೊರತೆಯಾದ ಜಮೀನಿನಲ್ಲಿಯೂ ಎಲೆ ಕೆಂಪಾಗುವಿಕೆ ಕಂಡುಬರುವುದು.
- ರಸಹೀರುವ ಕೀಟಗಳನ್ನು ಸಮರ್ಪಕವಾಗಿ ನಿರ್ವಹಿಸದಿದ್ದರೆ ಬೆಳೆಯಲ್ಲಿ ಕೆಂಪಾಗುವಿಕೆ ಹೆಚ್ಚಾಗಿ ಕಂಡುಬರುವುದು.
- ಅಸಮರ್ಪಕ ನೀರುಣಿಸುವಿಕೆಯಿಂದ ಅಂದರೆ ಬೆಳೆಗೆ ಹೆಚ್ಚಾಗಿ ಪದೇ ಪದೇ ನೀರು ಹಾಯಿಸಿದಾಗ ಇದರ ಬಾಧೆ ಹೆಚ್ಚು ಕಂಡುಬರುವುದು.
- ಎಲೆಗಳಲ್ಲಿನ ಸಾರಜನಕದ ಪ್ರಮಾಣವು ಶೇ. 2 ಕ್ಕಿಂತ ಕಡಿಮೆಯಾದಾಗ ಎಲೆಗಳು ಕೆಂಪಾಗುವವು. ಎಲೆಗಳಲ್ಲಿನ ಸಾರಜನಕ ಬೆಳವಣಿಗೆ ಹೊಂದುತ್ತಿರುವು ಕಾಯಿಗಳಿಗೆ ಪೂರೈಕೆಯಾಗಿ ಎಲೆಗಳಲ್ಲಿ ಸಾರಜನಕದ ಪ್ರಮಾಣ ಕಡಿಮೆಯಾಗುವುದು. ಜೊತೆಗೆ ಮೆಗ್ನೇಶಿಯಂ ಪೋಷಕಾಂಶದ ತೀವ್ರ ಕೊರತೆ ಕಂಡುಬರುವುದು. ಬೆಳವಣಿಗೆಯ ಪ್ರಾರಂಭಿಕ ಹಂತದಲ್ಲಿ ತೀವ್ರ ಸಾರಜನಕದ ಕೊರತೆಯಿಂದ ಎಲೆ ಕೆಂಪಾಗುವಿಕೆ ಕಂಡುಬಂದಲ್ಲಿ ಬೆಳೆಯಲ್ಲಿ ಹೂ-ಕಾಯಿಗಳ ಪ್ರಮಾಣ ಕಡಿಮೆಯಾಗಿ ಇಳುವರಿ ಕುಂಠಿತವಾಗುವುದು.
- ಹತ್ತಿ ಬೆಳೆಯ ಬೆಳವಣಿಗೆ, ಬಿತ್ತಿದ ಮೊದಲ 40–50 ದಿನಗಳಲ್ಲಿ ನಿಧಾನವಾಗಿರುತ್ತದೆ. ಬೆಳೆಯು 50–70 ದಿನಗಳಲ್ಲಿ ವೇಗದ ಬೆಳವಣಿಗೆ ಹೊಂದಿ ಮೋಪು ಹೊಂದಿದ ಟೊಂಗೆಗಳ ತ್ವರಿತ ಬೆಳವಣಿಗೆಯಾಗುವುದು. ಮುಂದೆ 70–90 ದಿನಗಳಲ್ಲಿ ಬೆಳೆಯಲ್ಲಿ ಮೊಗ್ಗು, ಹೂ ಹಾಗೂ ಕಾಯಿಗಳು ಕಂಡುಬಂದು, ಈ ಹಂತದಲ್ಲಿ ಬೆಳೆಗೆ ಸಮರ್ಪಕ ಪ್ರಮಾಣದಲ್ಲಿ ಮಣ್ಣಿನಲ್ಲಿ ತೇವಾಂಶ ಹಾಗೂ ಸಾರಜನಕ, ರಂಜಕ, ಪೋಟ್ಯಾಶ್ ಹಾಗೂ ಲಘು ಪೋಷಕಾಂಶ ಇರಬೇಕಾಗುತ್ತದೆ, ಇಲ್ಲವಾದಲ್ಲಿ ಮೋಪು, ಹೂ ಉದುರುವಿಕೆಗೆ ಕಾರಣವಾಗುತ್ತವೆ. ಇದಲ್ಲದೆ ಎಲೆಗಳಲ್ಲಿ ಕೆಂಪಾಗುವಿಕೆ ಲಕ್ಷಣ ಪ್ರಾರಂಭವಾಗುವವು.

ಲಕ್ಷಣಗಳು: ಮೆಗ್ನೇಶಿಯಂ ಲಘು ಪೋಷಕಾಂಶದ ಕೊರತೆಯಿದ್ದಲ್ಲಿ ಕೆಂಪಾಗುವ ಲಕ್ಷಣಗಳು ಬಲಿತ ಮೊದಲು ಬಂದ ಎಲೆಗಳಲ್ಲಿ ಕಂಡುಬಂದು, ಎಲೆ ಅಂಚು ಹಳದಿಯಾಗಿ ನಂತರ ಕೆಂಪು ಬಣ್ಣ ಎಲೆಯ ಎಲ್ಲ ಭಾಗಕ್ಕೆ ಹರಡುವುದು. ಕೊನೆಯ ಹಂತದಲ್ಲಿ ಎಲೆ ಒಣಗಿ ಉದುರುವುದು. ವಾತಾವರಣದಲ್ಲಿನ ವ್ಯತ್ಯಾಸಗಳಿಂದ ಸಸ್ಯ ಶರೀರ ಕ್ರಿಯೆಗಳಲ್ಲಿ ಏರು ಪೇರಾಗಿದ್ದರೆ ಎಲೆ ಕೆಂಪಾಗುವ ಲಕ್ಷಣಗಳು ಬೆಳೆಯ ಮೇಲ್ಭಾಗದ ಚಿಗುರು ಎಲೆಗಳಲ್ಲಿಯೂ ಕಂಡು ಬರುವುದು.

➢ **ಅನುಸರಿಸಬೇಕಾದ ಮುಂಜಾಗ್ರತೆ ಕ್ರಮಗಳೇನು ?**

- ಬೆಳೆಗೆ ಸಾಕಷ್ಟು ಪ್ರಮಾಣದಲ್ಲಿ ಸಾವಯವ ಗೊಬ್ಬರ ಒದಗಿಸಬೇಕು.
- ಮೇ ಕೊನೆಯವಾರದಿಂದ ಜೂನ್ ತಿಂಗಳ ಕೊನೆಯವರೆಗೆ ಬಿತ್ತಿದ ಬೆಳೆಯಲ್ಲಿ ಈ ಬಾಧೆ ಕಡಿಮೆ. ತಡವಾಗಿ ಬಿತ್ತಿದ ಬೆಳೆಯು ಅಕ್ಟೋಬರ್-ನವೆಂಬರ್ ಚಳಿಗಾಲದ ತಿಂಗಳಲ್ಲಿ ಹೆಚ್ಚು ಹೂ-ಕಾಯಿ ಹಂತದಲ್ಲಿರುವುದರಿಂದ, ಈ ಬಾಧೆ ಹೆಚ್ಚು.
- ನೀರಾವರಿ ಹಾಗೂ ಮಳೆಯಾಶ್ರಿತ ಹತ್ತಿ ಬೆಳೆಗೆ ಶಿಫಾರಸ್ಸು ಪ್ರಮಾಣ ಸಮತೋಲನ ರಸಗೊಬ್ಬರ ಹಾಗೂ ಸೂಕ್ತ ಹಂತದಲ್ಲಿ ಸಾರಜನಕ, ಪೋಟ್ಯಾಷ್ ಮೇಲು ಗೊಬ್ಬರ ಒದಗಿಸುವುದು ಅವಶ್ಯ. ಮೆಗ್ನೇಶಿಯಂ ಲಘು ಪೋಷಕಾಂಶ ವನ್ನು ಪ್ರತಿ ಎಕರೆಗೆ 8-10 ಕಿ.ಗ್ರಾಂ, ಮೆಗ್ನೇಶಿಯಂ ಸಲ್ಫೇಟ್ ರೂಪದಲ್ಲಿ ಬಿತ್ತುವಾಗ ಮಣ್ಣಿಗೆ ಒದಗಿಸಬೇಕು.
- ಬೆಳೆಯಲ್ಲಿ ನೀರು ನಿಂತು ತಂಪಾಗದ ಹಾಗೆ ಎಚ್ಚರಿಕೆ ವಹಿಸುವುದು ಮುಖ್ಯ. ಮಳೆ ಹೆಚ್ಚಾಗಿ ನೀರು ನಿಂತ ಜಮೀನಿನಲ್ಲಿ ನೀರು ಬಸಿದು ತೆಗೆದು ಬೆಳೆಗೆ ತಕ್ಷಣ ಯೂರಿಯಾ ಗೊಬ್ಬರವನ್ನು ಮೇಲು ಗೊಬ್ಬರವಾಗಿ ಒದಗಿಸಬೇಕು (ಎಕರೆಗೆ 25 ಕಿ.ಗ್ರಾಂ).
- 70–90 ದಿನಗಳ ಬೆಳೆಯಲ್ಲಿ ರಸಹೀರುವ ಕೀಟಗಳ ಬಾಧೆಯನ್ನು ಸೂಕ್ತ ಸಸ್ಯ ಸಂರಕ್ಷಣಾ ಕ್ರಮಗಳಿಂದ ಸಮರ್ಪಕವಾಗಿ ನಿರ್ವಹಿಸಬೇಕು.
- ಅಕ್ಟೋಬರ್-ನವೆಂಬರ್ ತಿಂಗಳುಗಳಲ್ಲಿ ತಂಪಾದ ವಾತಾವರಣದಲ್ಲಿ ಎಲೆಗಳ ಮೇಲೆ ಸಿಂಪರಣೆ ಮೂಲಕ ಬೆಳೆಗೆ ಸಾರಜನಕ ಹಾಗೂ ಲಘು ಪೋಷಕಾಂಶಗಳನ್ನು ಒದಗಿಸಬೇಕು.
- ಬೆಳೆಯಲ್ಲಿ 70 ದಿನಗಳ ನಂತರ ಕೆಂಪಾಗುವ ಲಕ್ಷಣಗಳು ಕಾಣಲು ಕಾಯದೇ, ಪ್ರತಿ ಲೀ. ನೀರಿಗೆ 10 ಗ್ರಾಂ ಮೆಗ್ನೇಶಿಯಂ ಸಲ್ಫೇಟ್ (ಶೇ. 1.0) + 10 ಗ್ರಾಂ 19:19:19 ನೀರಿನಲ್ಲಿ ಕರಗುವ ಗೊಬ್ಬರ ಅಥವಾ 20 ಗ್ರಾಂ ಯೂರಿಯಾ (ಶೇ. 2.0) ಗಳನ್ನು ಬೆರೆಸಿ ಪ್ರತಿ 15 ದಿನಗಳ ಅಂತರದಲ್ಲಿ 3 ಬಾರಿ ಸಿಂಪಡಿಸಬೇಕು. ಕೀಟನಾಶಕ ಸಿಂಪಡಿಸುವಾಗಲೂ ಅದರೊಂದಿಗೆ ಮಿಶ್ರಣ ಮಾಡಿ ಈ ಪೋಷಕಾಂಶಗಳನ್ನು ಸಿಂಪಡಿಸಬಹುದು.
- ಬೆಳೆಯಲ್ಲಿ ಅರ್ಧಕ್ಕಿಂತ ಹೆಚ್ಚು ಹತ್ತಿ ಕಾಯಿಗಳು ಒಡೆದಲ್ಲಿ ಅಂದರೆ 110–120 ದಿನಗಳ ನಂತರ ಎಲೆ ಕೆಂಪಾಗುವಿಕೆ ಸಹಜವಾಗಿ ಬರುತ್ತದೆ. ಇದರಿಂದ ಅಷ್ಟೇನೂ ಹಾನಿ ಆಗುವುದಿಲ್ಲ.
- ಒಟ್ಟಾರೆ ಎಲೆ ಕೆಂಪಾಗುವಿಕೆ ಒಂದು ಕ್ಲಿಷ್ಟ ಸಂಕೀರ್ಣ ಸಸ್ಯ ನ್ಯೂನ್ಯತೆಯಾಗಿದ್ದು. **ಎಲೆ ಕೆಂಪಾದ ನಂತರ ಯಾವ ಕ್ರಮಗಳಿಂದಲೂ ಅದನ್ನು ಸರಿಪಡಿಸಲಾಗುವುದಿಲ್ಲ, ಆದ್ದರಿಂದ ಎಲೆ ಕೆಂಪಾಗುವಿಕೆ ತಡೆಯಲು ಮುಂಜಾಗ್ರತೆ ಕ್ರಮಗಳು ಅವಶ್ಯ.**

*****